ಕಂದಾಯ ಅದಾಲತ್ತುಗಳ ಮೂಲಕ ಇತ್ಯರ್ಥಪಡಿಸಲಾದ ಪ್ರಕರಣಗಳು

213(3032); ಶ್ರೀ ಎಂ.ಟಿ.ಬಿ ನಾಗರಾಜ್ (ಹೊಸಕೋಟೆ)

ಅ) ಹೊಸಕೋಟೆ ತಾಲ್ಲೂಕಿನಲ್ಲಿ ಇದುವರೆಗೆ ಎಷ್ಟು ಕಂದಾಯ ಅದಾಲತ್‌ಗಳನ್ನು ನಡೆಸಲಾಗಿದೆ (ಹೋಬಳಿವಾರು ವಿವರ ನೀಡುವುದು);

ಆ) ಹಾಗಿದ್ದಲ್ಲಿ, ಈ ಕಂದಾಯ ಅದಾಲತ್ತುಗಳಲ್ಲಿ ಎಷ್ಟು ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ;

ಇ) ಇದರಲ್ಲಿ, ಊರ್ಜಿತ ಆಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಅನೂರ್ಜಿತವಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು (ಹೋಬಳಿವಾರು ಮಾಹಿತಿ ನೀಡುವುದು)?

ಶ್ರೀ ವಿ. ಶ್ರೀನಿವಾಸಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಹೊಸಕೋಟೆ ತಾಲ್ಲೂಕಿನಲ್ಲಿರುವ ಇದುವರೆಗೆ 39 ಕಂದಾಯ ಅದಾಲತ್‌ಗಳನ್ನು ನಡೆಸಲಾಗಿದೆ.

ಹೋಬಳಿವಾರು ವಿವರವನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ.

39 kandaya adalaths were conducted in Hoskote Taluk and the details of Hobli level are given in Annexure-1.

ಹೋಬಳಿವಾರು ವಿವರವನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ.

ಆ) ಹೊಸಕೋಟೆ ತಾಲ್ಲೂಕಿನಲ್ಲಿ ನಡೆದ ಕಂದಾಯ ಅದಾಲತ್‌ಗಳಲ್ಲಿ 9236 ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆ.

In Hosakote taluk 9236 cases are disposed in kandaya adalaths.

ಇ)

ಕ್ರ ಸಂ	ಹೋಬಳಿ	ಸ್ವೀಕೃತವಾದ ಪ್ರಕರಣಗಳ ಸಂಖ್ಯೆ	ಊರ್ಜಿತವಾದ ಪ್ರಕರಣಗಳ ಸಂಖ್ಯೆ	ಅನೂರ್ಜಿತವಾಗಿರುವ ಪ್ರಕರಣಗಳ ಸಂಖ್ಯೆ
1	ಅನುಗೊಂಡನಹಳ್ಳಿ	2176	2155	21
2	ಜಡಿಗೇನಹಳ್ಳಿ	3572	3411	161
3	ನಂದಗುಡಿ	1017	812	205
4	ಸೂಲಿಬೆಲೆ	2858	2858	0
	ಒಟ್ಟು	9623	9236	387

SL. NO	Hobali	Number of received cases	Number of disposed cases	Number of cases to be disposed
1	Anugondanahalli	2176	2155	21
2	Jadigenahalli	3572	3411	161
3	Nandagudi	1017	812	205
4	Soolibele	2858	2858	0
	Total	9623	9236	387

ಅನುಬಂಧ–1

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3032

ಹೊಸಕೋಟೆ ತಾಲ್ಲೂಕಿನ ಕಂದಾಯ ಅದಾಲತ್ ವಿವರ

ಕ್ರ.ಸಂ.	ತಾಲ್ಲೂಕು	ಕಂದಾಯ ಅದಾಲತ್‌ಗಳ ಸಂಖ್ಯೆ	ದಿನಾಂಕ	ಕಂದಾಯ ಅದಾಲತ್ ನಡೆದ ವೃತ್ತ/ಸ್ಥಳದ ಹೆಸರು	ಸ್ವೀಕೃತ ಅರ್ಜಿಗಳ ಸಂಖ್ಯೆ	ವಿಲೇವಾರಿ ಆದ ಅರ್ಜಿಗಳು	ಬಾಕಿ ಇರುವ ಅರ್ಜಿಗಳು
ಅನುಗೊಂಡನಹಳ್ಳಿ ಹೋಬಳಿ							
1	ಹೊಸಕೋಟೆ	1	14–10–2014	ಅನುಗೊಂಡನಹಳ್ಳಿ ವೃತ್ತ	407	399	08
2	ಹೊಸಕೋಟೆ	1	14–10–2014	ಮೇಡಿಮಲ್ಲಸಂದ್ರ ವೃತ್ತ	142	141	01
3	ಹೊಸಕೋಟೆ	1	15–10–2014	ಅರೇಹಳ್ಳಿ ವೃತ್ತ	457	452	05
4	ಹೊಸಕೋಟೆ	1	15–10–2014	ಗಣಗಲೂರು ವೃತ್ತ	203	200	03
5	ಹೊಸಕೋಟೆ	1	16–10–2014	ಮುತ್ಸಂದ್ರ ವೃತ್ತ	151	149	02
6	ಹೊಸಕೋಟೆ	1	16–10–2014	ದೇವನಗುಂದಿ ವೃತ್ತ	644	643	01
7	ಹೊಸಕೋಟೆ	1	17–10–2014	ಸಮೇತನಹಳ್ಳಿ ವೃತ್ತ	172	171	01
ಒಟ್ಟು		7		ಒಟ್ಟು	**2176**	**2155**	**21**

ಜಡಿಗೇನಹಳ್ಳಿ ಹೋಬಳಿ							
8	ಹೊಸಕೋಟೆ	1	17-11-2014	ಜಡಿಗೇನಹಳ್ಳಿ ವೃತ್ತ	246	228	18
9	ಹೊಸಕೋಟೆ	1	17-11-2014	ವಾಗಟ ವೃತ್ತ	343	325	18
10	ಹೊಸಕೋಟೆ	1	18-11-2014	ನಿಡಘಟ್ಟ ವೃತ್ತ	435	419	16
11	ಹೊಸಕೋಟೆ	1	18-11-2014	ಮುಗಬಾಳ ವೃತ್ತ	338	323	15
12	ಹೊಸಕೋಟೆ	1	19-11-2014	ಓರೋಹಳ್ಳಿ ವೃತ್ತ	497	472	25
13	ಹೊಸಕೋಟೆ	1	19-11-2014	ದೊಡ್ಡನಲ್ಲಾಳ ವೃತ್ತ	435	422	13
14	ಹೊಸಕೋಟೆ	1	20-11-2014	ಹೊಣಚನಹಳ್ಳಿ ವೃತ್ತ	443	426	17
15	ಹೊಸಕೋಟೆ	1	20-11-2014	ಕಟ್ಟಿಗೇನಹಳ್ಳಿ ವೃತ್ತ	267	257	10
16	ಹೊಸಕೋಟೆ	1	21-11-2014	ಕೋಡಿಹಳ್ಳಿ ವೃತ್ತ	301	289	12
17	ಹೊಸಕೋಟೆ	1	21-11-2014	ಮಾಕನಹಳ್ಳಿ ವೃತ್ತ	267	250	17
ಒಟ್ಟು		10			3572	3411	161

ನಂದಗುಡಿ ಹೋಬಳಿ							
18	ಹೊಸಕೋಟೆ	1	12-01-2015	ನಂದಗುಡಿ ವೃತ್ತ	112	100	12
19	ಹೊಸಕೋಟೆ	1	12-01-2015	ಇಟ್ಟಸಂದ್ರ ವೃತ್ತ	140	133	07
20	ಹೊಸಕೋಟೆ	1	13-01-2015	ನೆಲವಾಗಿಲು ವೃತ್ತ	80	63	17
21	ಹೊಸಕೋಟೆ	1	13-01-2015	ಸಿದ್ದನಹಳ್ಳಿ ವೃತ್ತ	63	56	07
22	ಹೊಸಕೋಟೆ	1	14-01-2015	ಹಿಂಡಿಗನಾಳ ವೃತ್ತ	47	26	21
23	ಹೊಸಕೋಟೆ	1	14-01-2015	ಎನ್. ಹೊಸಹಳ್ಳಿ ವೃತ್ತ	61	28	33
24	ಹೊಸಕೋಟೆ	1	16-01-2015	ಕಂಬಳಿಗಾನಹಳ್ಳಿ ವೃತ್ತ	46	42	04
25	ಹೊಸಕೋಟೆ	1	16-01-2015	ತಾವರಕೆರ ವೃತ್ತ	88	71	17
26	ಹೊಸಕೋಟೆ	1	17-01-2015	ಶಿವನಾಪುರ ವೃತ್ತ	59	40	19
27	ಹೊಸಕೋಟೆ	1	17-01-2015	ಕರಪ್ಪನಹಳ್ಳಿ ವೃತ್ತ	43	39	04
28	ಹೊಸಕೋಟೆ	1	19-01-2015	ಕೊರಟಿ ವೃತ್ತ	71	53	18
30	ಹೊಸಕೋಟೆ	1	20-01-2015	ಬೈಲನರಸಾಪುರ ವೃತ್ತ	43	25	18
ಒಟ್ಟು		12		ಒಟ್ಟು	1017	812	205

ಸೂಲಿಬೆಲೆ ಹೋಬಳಿ							
31	ಹೊಸಕೋಟೆ	1	24-02-2015	ಸೂಲಿಬೆಲೆ ವೃತ್ತ	207	207	–
32	ಹೊಸಕೋಟೆ	1	24-02-2015	ಬೆಂಡಿಗಾನಹಳ್ಳಿ ವೃತ್ತ	239	239	–
33	ಹೊಸಕೋಟೆ	1	26-02-2015	ಹಸಿಗಾಳ ವೃತ್ತ	169	169	–
34	ಹೊಸಕೋಟೆ	1	27-02-2015	ದೊಡ್ಡಅರಳಗೆರೆ ವೃತ್ತ	326	326	–
35	ಹೊಸಕೋಟೆ	1	27-02-2015	ಗಿಡ್ಡಪ್ಪನಹಳ್ಳಿ ವೃತ್ತ	206	206	–
36	ಹೊಸಕೋಟೆ	1	28-02-2015	ಬೇಗೂರು ವೃತ್ತ	505	505	–
37	ಹೊಸಕೋಟೆ	1	28-02-2015	ಕಂಬಳೀಪುರ ವೃತ್ತ	304	304	–
38	ಹೊಸಕೋಟೆ	1	03-02-2015	ಈಸ್ತೂರು ವೃತ್ತ	435	435	–
39	ಹೊಸಕೋಟೆ	1	03-02-2015	ಅತ್ತಿಬೆಲೆ ವೃತ್ತ	467	467	–
ಒಟ್ಟು		9			2858	2858	–
ಒಟ್ಟು ಜುಮ್ಲಾ		39			9623	9236	387

ಶ್ರೀ ಎಂ.ಟಿ.ಬಿ. ನಾಗರಾಜ್:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. 9236 ವಿಲೇ ಆದಂಥ ಪ್ರಕರಣಗಳ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ಇದರ ಜೊತೆಯಲ್ಲಿ ಕಂದಾಯ ಪೋಡಿ ಅದಾಲತ್ ಪ್ರಾರಂಭ ಮಾಡುತ್ತೇವೆಂದು ಹೇಳಿ, ಗ್ರಾಮಾಂತರ ಜಿಲ್ಲೆ ನೆಲಮಂಗಲದಲ್ಲಿ ಪ್ರಾರಂಭ ಮಾಡಿದ್ದಾರೆ. ಎಲ್ಲಾ ಜಿಲ್ಲೆಗಳ ತಾಲ್ಲೂಕುಗಳಲ್ಲಿ ಪೋಡಿ ಅದಾಲತ್ ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಕಂದಾಯ ಸಚಿವರಲ್ಲಿ ಒತ್ತಾಯವನ್ನು ಮಾಡುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಅವರು ಕಂದಾಯ ಅದಾಲತ್ ಬಗ್ಗೆ ಕೇಳಿದ್ದಾರೆ. ಅವರ ಕ್ಷೇತ್ರದ್ದೂ ಕೂಡ ಕೇಳಿದ್ದಾರೆ. ಅದಕ್ಕೆ ಸಂಪೂರ್ಣವಾದಂಥ ಮಾಹಿತಿಯನ್ನು ಕೊಟ್ಟಿದ್ದೇನೆ. ಎಷ್ಟು ಅದಾಲತ್‌ಗಳನ್ನು ಮಾಡಿದ್ದೇವೆ? ಎಷ್ಟು ವಿಲೇವಾರಿ ಮಾಡಿದ್ದೇವೆ? ಎಷ್ಟು ಕರೆಕ್ಷನ್‌ಗಳನ್ನು ಆರ್.ಟಿ.ಸಿ. ಯಲ್ಲಿ ಮಾಡಿಸಿದ್ದೇವೆ? ಎನ್ನತಕ್ಕಂಥದ್ದರ ಕುರಿತು ಅವರ ಕ್ಷೇತ್ರದ ಬಗ್ಗೆ ಪೂರ್ಣ ಮಾಹಿತಿಗಳನ್ನು ಕೂಡ ಕೊಟ್ಟಿದ್ದೇವೆ. 'ಕಂದಾಯ ಅದಾಲತ್' ಬಹಳ ಯಶಸ್ವಿಯಾಗಿರತಕ್ಕಂಥ ಕಾರ್ಯಕ್ರಮವಾಗಿದೆ. ಪೋಡಿ ಅದಾಲತ್ ಕಾರ್ಯಕ್ರಮವನ್ನೂ ಕೂಡ ಈಗ ಪ್ರಾರಂಭ ಮಾಡಿದ್ದೇವೆ. ತಮಗೆ ಗೊತ್ತಿದೆ, ಈ ಹಿಂದೆ ಸರ್ವೇಯರ್ಸ್‌ಗಳ ಕೊರತೆಯಿತ್ತು. ಈಗ ಸರ್ವೇಯರ್ಸ್‌ಗಳ ಕೊರತೆಯಿಲ್ಲ, ಪೋಡಿ ಅಂದೋಳನವೂ ಕೂಡ ಈಗ ಬಹಳ ಚೆನ್ನಾಗಿ ನಡೆಯುತ್ತಿದೆ. 40 ರಿಂದ 50 ವರ್ಷಗಳ ಹಿಂದಿನಿಂದಲೂ ಪೋಡಿಯಾಗದೆ ಇರತಕ್ಕಂಥದ್ದರ ಬಗ್ಗೆ ಕೂಡ ಈಗ ಪೋಡಿಯಾಗುತ್ತಿದೆ. ರೈತರು ಈಗ ಸಂತೋಷದಲ್ಲಿದ್ದಾರೆ, ಅವರ ಮನೆ ಬಾಗಿಲಿಗೇ ಹೋಗಿ ಪೋಡಿ ಮಾಡಿಕೊಡತಕ್ಕಂಥ ವ್ಯವಸ್ಥೆಯನ್ನು ಈಗ ಮಾಡಿದ್ದೇವೆ.

ಅಧ್ಯಕ್ಷರು:– ಮುಂದಿನ ಪ್ರಶ್ನೆ ಸಿ.ಟಿ. ರವಿಯದ್ದು, ಈಗ ಅವರು ಇಲ್ಲಿ ಇಲ್ಲ. ಮುಂದಿನ ಪ್ರಶ್ನೆ ಬಿ.ಆರ್. ಪಾಟೀಲ್, ಅವರು ಕೂಡ ಈಗ ಇಲ್ಲಿ ಇಲ್ಲ. ಮುಂದಿನ ಪ್ರಶ್ನೆಯನ್ನು ಕೇಳಿರುವ ಎಸ್.ಆರ್. ಶ್ರೀನಿವಾಸ್‌ರವರು ಕೂಡ ಈಗ ಸದನದಲ್ಲಿ ಇಲ್ಲ. ಮುಂದಿನ ಪ್ರಶ್ನೆ ಕ್ಯಾತ್ಸಂದ್ರ ರಾಜಣ್ಣನವರದ್ದು.